(ಸದನವು ಬೆಳಿಗ್ಗೆ 11 ಗಂಟೆ 17 ನಿಮಿಷಗಳಿಗೆ ಸಮಾವೇಶಗೊಂಡಿತು)

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

(ಗೊಂದಲ)

(ಭಾರತೀಯ ಜನತಾ ಪಕ್ಷ ಮತ್ತು ಜನತಾದಳ (ಜಾತ್ಯಾತೀತ) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ದತ್ತರವರೆ, ದಯವಿಟ್ಟು ಒಂದು ನಿಮಿಷ ಇರಿ, ಹುಟ್ಟುಹಬ್ಬದ ಪ್ರಕಟಣೆಯನ್ನು ಓದುತ್ತೇನೆ.

ದಿನಾಂಕ:19–03–2015 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರು ಹಾಗೂ ಮಾನ್ಯ ಸರ್ಕಾರಿ ಮುಖ್ಯ ಸಚೇತಕರೂ ಆದ ಶ್ರೀ ಅಶೋಕ ಎಂ.ಪಟ್ಟಣಶೆಟ್ಟಿ ಇವರಿಗೆ ಜನ್ಮ ದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನು ಅವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಸದನದ ಕಲಾಪವನ್ನು ನಡೆಸಬೇಕೆಂಬುದು ನನ್ನ ಪ್ರಾರ್ಥನೆಯಾಗಿದೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಒಂದು ನಿಮಿಷ ಎಲ್ಲರೂ ಮೌನವಾಗಿರಿ, ಸಂತಾಪ ಸೂಚನೆಯನ್ನು ಓದುತ್ತೇನೆ.